ನುಡಿಸಂಕರದ ಕನ್ನಡ ಚಹರೆಯು ತತ್ವಪದ, ಮೊಹರಂ ಹಾಡುಗಳಲ್ಲಿ ವಿಶೇಷವಾಗಿದೆ. ಉರ್ದು–ಕನ್ನಡ ಸಾಲುಗಳು ಒಂದರ ಬಳಿಕ ಮತ್ತೊಂದು ಬರುವಂತಹ ('ಸಬಕಹತ್ತೈ ಹೈ ಈಶ್ವರ ಅಲ್ಲ, ಇದರ ಭೇದ ಯಾರಿಗೆ ತಿಳಿದಿಲ್ಲ') ತತ್ವಪದವನ್ನು, ಕಡಕೋಳ ಮಡಿವಾಳಪ್ಪನ ಶಿಷ್ಯ ಚೆನ್ನೂರ ಜಲಾಲ ರಚಿಸಿರುವನು. ಸೂಫಿಸಂತನಿಂದ ಪ್ರೇರಿತನಾದ ಮಹಿಪತಿರಾಯನ ತತ್ವಪದಗಳಲ್ಲಿ ಉರ್ದು, ಮರಾಠಿ, ತೆಲುಗು, ಕನ್ನಡ – ಹೀಗೆ ನಾಲ್ಕು ಭಾಷೆಯ ಸಂಕರ ಸಂಭವಿಸುತ್ತದೆ.

ಈ ಸಂಕರಗನ್ನಡವು ಜನಪದ ಸಾಹಿತ್ಯ, ಬಯಲಾಟ ಮತ್ತು ಕಂಪನಿ ರಂಗಭೂಮಿಗಳಲ್ಲಿ ಇನ್ನೊಂದೇ ಪರಿಯಲ್ಲಿದೆ. ಕನ್ನಡ ಜನಪದ ಮಹಾಭಾರತದಲ್ಲಿ ಅರ್ಜುನನು ಜೋಗಿಯಾಗಿ ತಿರುಗಾಡುವಾಗ, ಕೋಮಟಿಗರ ತಮಿಳರ ಮುಸ್ಲಿಮರ ಬೀದಿಗಳಿಗೆ ಹೋಗುತ್ತಾನೆ. ಆಗ ಅಲ್ಲಿನ ಹೆಂಗಸರು ಅವನ ಚೆಲುವನ್ನು ತಂತಮ್ಮ ಮನೆಮಾತುಗಳಲ್ಲೇ ಬಣ್ಣಿಸುತ್ತ ಸಂಭ್ರಮಿಸುತ್ತಾರೆ. ಅರ್ಜುನನು ಎಲ್ಲರಿಗೂ ಸಲ್ಲುವವನಾಗುತ್ತಾನೆ. ಬಳ್ಳಾರಿಯ ಬಯಲಾಟಗಳಲ್ಲಿ ಭೀಮನು ಕನ್ನಡದಲ್ಲೂ, ಸುಯೋಧನನು ತೆಲುಗಿನಲ್ಲೂ ಮಾತಾಡುವರು; ಶಿವನು ಕನ್ನಡದಲ್ಲಿ, ಪಾರ್ವತಿಯು ತೆಲುಗಿನಲ್ಲಿ ಮಾತುಕತೆಯಾಡುವರು; ಸೂತ್ರಧಾರ ಕನ್ನಡದಲ್ಲಿ ನುಡಿದರೆ, ಸಾರಥಿಯು ತೆಲುಗಿನಲ್ಲಿ ನಾಂದಿಪದ್ಯ ಹಾಡುವನು. ಇಂತಹ ನಾಟಕ ಕಂಪನಿಗಳು ಸೊಲ್ಲಾಪುರಕ್ಕೆ ಹೋದರೆ, ನಾಂದಿಪದ್ಯವು ಮರಾಠಿ ಅಭಂಗವಾಗಿ ಬದಲಾಗಬಹುದು. ನುಡಿಸಂಕರವು ಕವಿಗಳ ಗಾಯಕರ ನಟರ ಬಹುಭಾಷಿಕ ಪರಿಣತಿಯನ್ನು ಮಾತ್ರ ಪ್ರದರ್ಶಿಸುವುದಿಲ್ಲ. ಜನಭಾಷೆಯನ್ನು ಮಾತು, ಅಭಿನಯ, ಹಾಡುಗಳಲ್ಲಿ ತರುವ ಮೂಲಕ, ಪರಿಸರದಲ್ಲಿರುವ ಬಹುಭಾಷಿಕ ಓದುಗ–ಕೇಳುಗ–ನೋಡುಗರನ್ನು ಒಂದು ಕೇಂದ್ರಕ್ಕೆ ತರಲೆತ್ನಿಸುತ್ತಿರುತ್ತದೆ. ಇದು ಎದುರಿರುವ ಸಮಸ್ತರನ್ನೂ ಭಾವನಾತ್ಮಕವಾಗಿ ಒಳಗೊಳ್ಳುವ ಪ್ರಜಾಸತ್ತಾತ್ಮಕ ಮನೋಧರ್ಮವಾಗಿದೆ.

ಸಂಕರಪಠ್ಯಗಳು ಕನ್ನಡದ ಮೊದಲ ಗದ್ಯಪಠ್ಯವಾದ ವಡ್ಡಾರಾಧನೆಯಿಂದಲೇ ಶುರುವಾಗುತ್ತವೆ. ಪ್ರತಿ ಕತೆಯಲ್ಲೂ ನಾಂದೀ ಪದ್ಯವಾಗಿ ಪ್ರಾಕೃತದ ಗಾಹೆಗಳಿವೆ. ಗಾಹೆಗಳ ವಿವರಣೆಯಾಗಿ ಕನ್ನಡದಲ್ಲಿ ಕಥನ ಬಿಚ್ಚಿಕೊಳ್ಳುತ್ತದೆ. ನಡುವೆ ಸವಣರ ಉಪದೇಶ ಬಂದಾಗ ಸಂಸ್ಕೃತ ಶ್ಲೋಕಗಳು ಸೇರುತ್ತವೆ. ರತ್ನಾಕರವರ್ಣಿಯು, ತನ್ನ ಕಾವ್ಯವು ತೆಲುಗರು, ಕನ್ನಡಿಗರು, ತುಳುವರು ಮೆಚ್ಚುವರು ಎಂದು ಆಯಾ ಭಾಷೆಗಳಲ್ಲೇ ಉದ್ಗಾರಗಳನ್ನು ದಾಖಲಿಸುತ್ತಾನೆ. ಪ್ರಾಚೀನ ಲೇಖಕರು ಚತುರ್ಥಭಾಷಾ ಪಂಡಿತರಾಗಿದ್ದರಿಂದ ಇಂತಹ ಬಹುಭಾಷಿಕ ಪಠ್ಯರಚನೆಗಳು ಸಹಜವಾಗಿವೆ. ಸಂಸ್ಕೃತದಲ್ಲೂ ಮಹಿಳೆಯರು ಶೂದ್ರರು ಮಕ್ಕಳು ಪ್ರಾಕೃತದಲ್ಲಿ



ಮಾತನಾಡುವ ನಾಟಕಗಳಿವೆ. ಆದರೆ ಅಲ್ಲಿನ ನುಡಿಸಂಕರವು ಭಾಷಿಕ ವೈವಿಧ್ಯದ ಜತೆಗೆ ಸಾಮಾಜಿಕ ಶ್ರೇಣೀಕರಣವನ್ನೂ ಒಳಗೊಂಡಿದೆ.

ಕರ್ನಾಟಕದಲ್ಲಿ ಅತಿಹೆಚ್ಚು ಭಾಷೆಗಳು ಒಟ್ಟಿಗೆ ಬಾಳುತ್ತಿರುವ ಕರಾವಳಿಯಿಂದ ಬಂದ ಗುಲ್ವಾಡಿ ವೆಂಕಟರಾಯರು, 'ಇಂದಿರಾಬಾಯಿ'ಯನ್ನು (1899) ರಚಿಸಿದರು. ಇದರಲ್ಲಿ ಕೆಲಸದಾಳುಗಳು ತುಳುವಿನಲ್ಲೂ, ಪೋಲೀಸರು ಕೊಂಕಣಿಯಲ್ಲೂ, ಇಂಗ್ಲಿಷಿನಲ್ಲೂ ಮಾತಾಡುವ ವಿನ್ಯಾಸವಿದೆ. ಈ ವಿನ್ಯಾಸವನ್ನು ಮುಂದಿನ ಕಾದಂಬರಿಗಳು ಮುಂದುವರೆಸಲಿಲ್ಲ. ಮುಂದುವರೆಸಿದ್ದರೆ, ಕುವೆಂಪು ಕಾದಂಬರಿ ಮುಸ್ಲಿಮರು ಬ್ಯಾರಿ ಅಥವಾ